ಶ್ರೀ ಎ. ರಾಮಪ್ಪ.—ರೆಕಗ್‌ನೈಸ್ಡ್ ಅಥವಾ ಅನ್ ರೆಕಗ್‌ನೈಸ್ಡ್ ಎಂದು ನೋಡಿ ಅಂತಹ ಕಂಪೆನಿ ಮೇಲೆ ಕಡಿವಾಣ ಹಾಕದೆ ಜಿಲ್ಲಾ ಪರಿಷತ್ತಿನವರಿಗೆ ಪೂರ್ಣ ಅಧಿಕಾರ ಕೊಡುತ್ತೀರಾ? ಅವರಿಗೆ ಬಿಲ್ ಮಾಡಿಕೊಂಡು ರೊಕ್ಕ ತೆಗೆದುಕೊಳ್ಳುವುದಕ್ಕೆ ಬಿಡುತ್ತೀರಾ? ಇದಕ್ಕೆ ಆಡಿಟ್ ಏನಾದರೂ ಇದೆಯೇ ಬೇರೆ ಏನಾದರೂ ವ್ಯವಸ್ಥೆ ಇದೆಯೇ?

ಶ್ರೀಮತಿ ಮನೋರಮ ಮಧ್ವರಾಜ್.—ನಮ್ಮ ಇಲಾಖೆಯವರು ರೇಟ್ ಕಾಂಟ್ರಾಕ್ಟ್ ಮಾಡಿ ಇಂಥದ್ದೇ ಕಂಪನಿಯಿಂದ ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟಿದ್ದಾರೆ. ಇದಕ್ಕೆಲ್ಲ ಬಸವಲಿಂಗಪ್ಪನವರೇ ಸರಿಯಾದ ವ್ಯಕ್ತಿ ಎಂದು ಭಾವಿಸುತ್ತೇನೆ. ಅವರನ್ನು ಹತೋಟಿಗೆ ತರಬೇಕೆಂದು ಕೇಳಿಕೊಂಡು, ಈ ಬಗ್ಗೆ ಏನಾದರೂ ನಿರ್ದಿಷ್ಟವಾಗಿ ದೂರುಗಳು ಬಂದರೆ ಅದನ್ನು ತನಿಖೆಗೆ ಒಳಪಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಜಿಲ್ಲಾ ಪರಿಷತ್ತುಗಳ ಆಡಳಿತ ಅಧಿಕಾರ

೨೬೨. ಶ್ರೀ ಕೆ. ಹರ್ಷಕುಮಾರ ಗೌಡ. (ಚಾಮರಾಜ ಕ್ಷೇತ್ರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನಗರ ಪ್ರದೇಶಕ್ಕೆ ಸೇರಿದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಆಸ್ಪತ್ರೆಗಳು ಜಿಲ್ಲಾ ಪರಿಷತ್ ಆಡಳಿತಕ್ಕೆ ಒಳಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಅವುಗಳ ಅಭಿವೃದ್ಧಿಯ ಬಗ್ಗೆ ಚರ್ಚಿಸಲು ಜನತಾ ಪ್ರತಿನಿಧಿಗಳಿಗೆ ಅವಕಾಶ ವಿದೆಯೇ ಇಲ್ಲದಿದ್ದರೆ ಅವಕಾಶ ಮಾಡಿ ಕೊಡಲಾಗುವುದೆ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಜಿಲ್ಲಾ ಪರಿಷತ್ ಕಾಯಿದೆ ಕಲಂ ೧೩೮ (೧)ರ ಅನ್ವಯ ನಗರ ಪ್ರದೇಶಕ್ಕೆ ಸೇರಿದ ಶಾಲೆಗಳು ಆಸ್ಪತ್ರೆಗಳು ಜಿಲ್ಲಾ ಪರಿಷತ್ ಆಡಳಿತಕ್ಕೆ ಒಳಪಡಬಹುದಾಗಿದೆ.

ಆ) ಅವಕಾಶವಿದೆ.

ಶ್ರೀ ಹರ್ಷಕುಮಾರ ಗೌಡ.—ನನ್ನ ಮೊದಲನೇ ಪ್ರಶ್ನೆಗೆ ಜಿಲ್ಲಾ ಪರಿಷತ್ ಕಾಯಿದೆ ಕಲಂ ೧೩೮ (೧)ರ ಅನ್ವಯ ನಗರ ಪ್ರದೇಶಕ್ಕೆ ಸೇರಿದ ಶಾಲೆಗಳು ಆಸ್ಪತ್ರೆಗಳು ಜಿಲ್ಲಾ ಪರಿಷತ್ ಆಡಳಿತಕ್ಕೆ ಒಳಪಡುತ್ತವೆಂದು ಹೇಳಿದ್ದಾರೆ. ನಾನು ಅವರಿಂದ ಉತ್ತರ ಬಯಸುತ್ತೇನೆ. ನಮ್ಮ ಮೈಸೂರು ನಗರ ಜಿಲ್ಲಾ ಪರಿಷತ್ತಿಗೆ ಯಾವ ಆಧಾರದ ಮೇಲೆ ಯಾವ ಉದ್ದೇಶ ಇಟ್ಟುಕೊಂಡು ಸೇರಿಸಿದ್ದೀರಿ ಜೊತೆಗೆ ಎರಡನೇ ಪ್ರಶ್ನೆಗೆ ಜಿಲ್ಲಾ ಪರಿಷತ್ತಿನಲ್ಲಿ ಶಾಸಕರು ಮಾತನಾಡುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದಾರೆ. ಅವಕಾಶ ಇದೆಯೆಂ? ಇದ್ದರೆ ಎಲ್ಲಿ ಅವಕಾಶ ಮಾಡಿದ್ದೀರಿ? ಇಲ್ಲದಿದ್ದರೆ ಯಾವಾಗಿನಿಂದ ಅವಕಾಶ ಮಾಡಿಕೊಡುತ್ತೀರಿ?

ಶ್ರೀ ಬಿ. ಬಸವಲಿಂಗಪ್ಪ.—ಜಿಲ್ಲಾ ಪರಿಷತ್ತಿಗೆ ಒಳಪಟ್ಟಿರತಕ್ಕ ಸಂಸ್ಥೆಗಳು ಏನಿವೆ ಅವುಗಳ ಮೇಲೆ ಅವರಿಗೆ ಹತೋಟಿ ಉಂಟು. ಉಳಿದವುಗಳ ಮೇಲೆ ಇಲ್ಲ.

ಶ್ರೀ ಹರ್ಷಕುಮಾರ ಗೌಡ.—ನಮ್ಮ ಮೈಸೂರು ನಗರದ ಸುಮಾರು ೨ ಲಕ್ಷ ಶಾಲಾ ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ಜವಾಬ್ದಾರಿ ಮತ್ತು ಉಪಾಧ್ಯಾಯರ ಸಮಸ್ಯೆಗಳ ಮತ್ತು ವರ್ಗಾವಣೆಯ ಜವಾಬ್ದಾರಿ ಜೊತೆಗೆ ಪ್ರೈಮರಿ ಹೆಲ್ತ್ ಸೆಂಟರ್‌ಗಳು ಮತ್ತು ಪಶುಸಂಗೋಪನಾ ಸಂಸ್ಥೆಗಳನ್ನು ಮೈಸೂರು ನಗರದ ಜಿಲ್ಲಾ ಪರಿಷತ್ತಿಗೆ ಸೇರಿಸಿದ್ದಾರೆ. ಯಾರ ಬಗ್ಗೆ ನಾವು ಅಲ್ಲಿ ಚರ್ಚೆ ಮಾಡಬೇಕು ಹಾಗೂ ಮಾತನಾಡಬೇಕ್ಕು, ಅಂತಹ ಅವಕಾಶ ಇರದಂತಹ ಪರಿಸ್ಥಿತಿಯನ್ನು ಮೈಸೂರು ನಗರದ ಶಾಸಕರು ಎದುರಿಸುತ್ತಿದ್ದಾರೆ. ಜಿಲ್ಲಾ ಪರಿಷತ್ತುಗಳನ್ನು ಯಾವ ಉದ್ದೇಶ ಇಟ್ಟುಕೊಂಡು ನಜೀರ್‌ಸಾಬ್‌ರವರು ರಚನೆ ಮಾಡಿದರೋ ಅಲ್ಲಿ ಪಟ್ಟಣ ಪ್ರದೇಶಗಳವರಿಗೆ ಅವಕಾಶ ಇಲ್ಲ. ಗ್ರಾಮೀಣ ಪ್ರದೇಶಗಳು ವಿಶೇಷ ಒಳಪಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿರಬಹುದು. ಆದ್ದರಿಂದ ನಾನು ಪ್ರಾರ್ಥಿಸುವುದಾದರೂ ಇಷ್ಟೆ, ಪಟ್ಟಣ ಪ್ರದೇಶದ ಶಾಸಕರು ಕೂಡ ಅಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು, ಹಾಗೂ ಈ ತಾರತಮ್ಯವನ್ನು ಅಸಂಗತ ನೀತಿಯನ್ನು ಸರಿಪಡಿಸಬೇಕೆಂದು ಒತ್ತಾಯಿಸುತ್ತೇನೆ. ಇಲ್ಲದಿದ್ದರೆ ಅರಳಿ ಕಟ್ಟೆ ಮೇಲೆ ಕುಳಿತುಕೊಂಡು ಮಾತನಾಡುವುದಕ್ಕೆ (ಶಾಲೆಗಳ ಬಗ್ಗೆ

ಆರೋಗ್ಯ ಇಲಾಖೆಯ ಬಗ್ಗೆ, ಪಶು ಸಂಗೋಪನಾ ಇಲಾಖೆ ಬಗ್ಗೆ) ಅವಕಾಶ ಮಾಡಿಕೊಡಿ. ಈ ಮೂರೂ ಇಲಾಖೆಗಳಲ್ಲಿ ಹೊಂದಾಣಿಕೆ ಅಭಾವ ಏನಾದರೂ ಇದ್ದರೆ ಅದರ ಬಗ್ಗೆ ನಾವು ಹೇಳಬೇಕಾಗುತ್ತದೆ. ಶಿಕ್ಷಣ ಸಚಿವರು ಹೇಳುತ್ತಾರೆ, ಇದು ನಮಗೆ ಸೇರಿದೆ ಎಂದು, ಆರೋಗ್ಯ ಸಚಿವರು ಹೇಳುತ್ತಾರೆ, ಇದು ನಮಗೆ ಸೇರಿದೆ ಎಂದು. ಪಶು ಸಂಗೋಪನಾ ಸಚಿವರು ಹೇಳುತ್ತಾರೆ. ಇದು ನಮಗೆ ಸೇರಿದೆ ಎಂದು. ಪಂಚಾಯತ್ ರಾಜ್ ಸಚಿವರು ನಮಗೆ ಸೇರಿದೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಸ್ಪಷ್ಟೀಕರಣ ಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಸಿಟಿ ವ್ಯಾಪ್ತಿಯಲ್ಲಿರತಕ್ಕ ಶಾಸಕರು ಯಾರಿರುತ್ತಾರೆ, ಅವರು ಈ ಜಿಲ್ಲಾ ಪರಿಷತ್ತುಗಳಲ್ಲಿ ಸದಸ್ಯರಾಗಿ ಹೋಗಿ ಮಾತನಾಡತಕ್ಕ ಅವಕಾಶ ಇಲ್ಲ. ಈಗ ತಾವು ಏನು ಹೇಳಿದ್ದೀರಿ ಈ ಸಮಸ್ಯೆ ಸಿಟಿಯಲ್ಲಿರತಕ್ಕ ವಿದ್ಯಾಸಂಸ್ಥೆಗಳು ಪಶು ಸಂಗೋಪನಾ ಸಂಸ್ಥೆಗಳು ಏನಿವೆ ಅವುಗಳ ಬಗ್ಗೆ ಜಿಲ್ಲಾ ಪರಿಷತ್ತಿಗೆ ಹೋಗಿ ಹೇಳಬೇಕೆಂದರೆ ಅವಕಾಶ ಇಲ್ಲ. ಆದರೆ ಮುಂದೆ ಏನು ಒಂದು ತಿದ್ದುಪಡಿ ತರುತ್ತಿದೇವೆ ಆಗ ಇದನ್ನು ಯೋಚನೆ ಮಾಡತಕ್ಕ ವಿಷಯವಾಗಿದೆ.

ಗದಗ ಸಹಕಾರಿ ಎಣ್ಣೆ ಕಾರ್ಖಾನೆಯ ನವೀಕರಣ

೬೦೪. ಶ್ರೀ ಕೆ. ಪಿಚ್. ಪಾಟೀಲ್ (ಗದಗ).—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ಸಹಕಾರಿ ಎಣ್ಣೆ ಘಟಕ, ಗದಗ ಇದರ ನವೀಕರಣಕ್ಕಾಗಿ ಸರ್ಕಾರದ ಶಿಫಾರಸ್ಸಿನ ಮೇಲೆ ಎನ್.ಸಿ.ಡಿ.ಸಿಯವರು ೨೯೧ ಲಕ್ಷ ರೂ.ಗಳನ್ನು ಮಂಜೂರು ಮಾಡಿರುವುದು ನಿಜವೇ ?

ಆ) ಮೊದಲ ಕಂತಾಗಿ ಕೊಟ್ಟ ಹಣವೆಷ್ಟು ?

ಇ) ಈ ಯೋಜನೆ ಪೂರ್ತಿ ಮುಗಿದಿದ್ದರೂ ಸಹ ಇನ್ನೂ ಸರ್ಕಾರದವರು ಹಣ ಬಿಡುಗಡೆ ಮಾಡದಿರಲು ಕಾರಣವೇನು ?

ಈ) ಎನ್.ಸಿ.ಡಿ.ಸಿ.ಯಿಂದ ಮಂಜೂರಾದ ಹಣವನ್ನು ಇನ್ನೂ ಪಡೆಯದೆ ಇರಲು ಕಾರಣವೇನು ? ಹಣದ ಅಭಾವದಿಂದ ಸದರಿ ಸಂಸ್ಥೆಯ ವ್ಯವಹಾರವು ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಮನೋರಮಾ ಮಂಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು) —

ಅ) ಹೌದು

ಆ) ರೂ. ೧೬೮.೬೮ ಲಕ್ಷಗಳು

ಇ) ಎನ್.ಸಿ.ಡಿ.ಸಿ.ಯವರ ಪರತ್ತಿನಂತೆ ಎರಡನೇ ಕಂತನ್ನು ಬಿಡುಗಡೆ ಮಾಡಬೇಕಾದಲ್ಲಿ ಸಂಘವು ತನ್ನ ಪಾಲಿನ ಪೂರ್ತಿ ಹಣವನ್ನು ಪೂರ್ಣವಾಗಿ ಸಂಗ್ರಹಿಸಬೇಕಾಗಿತ್ತು. ಆದರೆ ಸಂಘವು ರೂ. ೦೦ಲಕ್ಷ ಬಾಕಿ ಹಣವನ್ನು ಕೂಡಿಸಿಲ್ಲದ ಕಾರಣ ಮತ್ತು ಘಟಕವನ್ನು ವಿಧಿಸಿದ್ದ ಅವಧಿಯೊಳಗೆ ಪೂರ್ಣಗೊಳಿಸಿರುವುದಿಲ್ಲವಾದ್ದರಿಂದ ಎರಡನೇ ಕಂತನ್ನು ಬಿಡುಗಡೆ ಮಾಡಲು ಸಾಧ್ಯವಾಗಲಿಲ್ಲ.

ಈ) ಎನ್.ಸಿ.ಡಿ.ಸಿ.ಯವರಿಂದ ಯೋಜನೆಯಂ ಮಂಜೂರಾದ ನಂತರ ರಾಜ್ಯ ಸರ್ಕಾರದವರು ಮೊದಲನೆಯ ಕಂತಿನ ಹಣವನ್ನು ಬಿಡುಗಡೆ ಮಾಡಿ ಅದನ್ನು ಪೂರ್ಣ ಉಪಯೋಗಿಸಿಕೊಂಡ ನಂತರ ಮತ್ತು ಎನ್.ಸಿ.ಡಿ.ಸಿ.ಯವರು ವಿಧಿಸಿರುವ ಷರತ್ತುಗಳನ್ನು ಪಾಲಿಸಿದ ನಂತರ ಎರಡನೆ ಕಂತನ್ನು ಎನ್ ಸಿ.ಡಿ.ಸಿ.ಯವರಿಂದ ಪಡೆಯಬೇಕಾಗಿತ್ತು. ಆದರೆ ಸಂಘವು ಮೇಲೆ ತಿಳಿಸಿರುವಂತೆ ಷರತ್ತನ್ನು ಪಾಲಿಸಲಿಲ್ಲದ ಕಾರಣ ಎರಡನೇ ಕಂತನ್ನು ಬಿಡುಗಡೆ ಮಾಡಲಾಗಲಿಲ್ಲ. ಈ ಯೋಜನೆಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ. ಈ ಯೋಜನೆಗಾಗಿ ಹಣವನ್ನು ಜಿಲ್ಲಾ ಪರಿಷತ್ತಿನ ಆಯವ್ಯಯದಲ್ಲಿ ಭರಿಸಬೇಕಾಗುತ್ತದೆ. ಆದರೆ ಈ ಯೋಜನೆಗಾಗಿ ಜಿಲ್ಲಾ ಪರಿಷತ್ತು, ಧಾರವಾಡ ಇವರು ಯಾವ ಹಣವನ್ನು ಆಯವ್ಯಯದಲ್ಲಿ ಒದಗಿಸಿರುವುದಿಲ್ಲ. ಆದುದರಿಂದ ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್ತು, ಧಾರವಾಡ ಇವರಿಗೆ ಈ ಯೋಜನೆಗೆ ಹಣವನ್ನು ಒದಗಿಸಿಕೊಡಲು ಈಗಾಗಲೇ ನಿರ್ದೇಶಿಸಲಾಗಿದೆ.